ಮುಬ್ಬುಬೆಳಕಿನ ಸಣ್ಣ ಕೊಠಡಿ. ಕಬ್ಬಿಣದ ಮಂಚದ ಮೇಲೆ ರೋಗಿ ಅಂಗಾತ ಮಲಗಿದ್ದಾನೆ. ರೇಡಿಯಾಲಜಿಸ್ಟ್ ವ್ಯಕ್ತಿಯ ಮೇಲೆ ವಿಕಿರಣ ಹಾಯಿಸಿ ಚಿಕಿತ್ಸೆ ನೀಡುತ್ತಾನೆ. ತಿಂಗಳಾನುಗಟ್ಟಲೆ, ವರ್ಷಾನುಗಟ್ಟಲೆ ಆತ ಅಂಜುತ್ತ, ಅಳುಕುತ್ತ ಆಸ್ಪತ್ರೆಗೆ ಹೋಗಿ ರೇಡಿಯೇಷನ್, ಕಿಮೋಥೆರಪಿ, ಯಾತನೆಯ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡು ಮಾನಸಿಕ, ದೈಹಿಕ ಹಿಂಸೆ ಅನುಭವಿಸುತ್ತಾನೆ. ರೋಗಿಯ ಜೊತೆಗೆ ಮನೆಮಂದಿಗೂ ಕ್ಷಣ ಕ್ಷಣಕ್ಕೂ ಆತಂಕ, ಭಯ. ಇಷ್ಟೆಲ್ಲ ಚಿಕಿತ್ಸೆಯ ನಂತರ ಚೇತರಿಸಿಕೊಳ್ಳುತ್ತಿದ್ದ ರೋಗಿಗಳು ಕೆಲವೇ ಮಂದಿ. ನತದೃಷ್ಟರದು ಸಾವಿನ ಮನೆಯ ಹಾದಿ.

ಹವಾನಿಯಂತ್ರಿತ ಸುಸಜ್ಜಿತ ಕೊಠಡಿ. ನುರಿತ ಶಸ್ತ್ರಚಿಕಿತ್ಸಕ, ರೊಬಾಟ್ ಯಂತ್ರದ ಮುಂದೆ ಕುಳಿತು ಸೂಚನೆ ನೀಡುತ್ತಾನೆ. ರೊಬಾಟ್ ಸರಸರನೆ ಕ್ಯಾನ್ಸರ್ ಭಾಗವನ್ನು ಕತ್ತರಿಸಿಹಾಕುತ್ತದೆ. ಕ್ಷಣಮಾತ್ರದಲ್ಲಿ ಗಾಯಕ್ಕೆ ಹೊಲಿಗೆ ಹಾಕುತ್ತದೆ. ಕೆಲವೇ ದಿನಗಳ ಆಸ್ಪತ್ರೆ ವಾಸ ಬಳಿಕ ರೋಗಿ ಆರಾಮವಾಗಿ ಮನೆಗೆ ಹೋಗುತ್ತಾನೆ. ಕೆಲ ತಿಂಗಳುಗಳಲ್ಲೇ ರೋಗಿ ಸಹಜ ಜೀವನಕ್ಕೆ ಹೊಂದಿಕೊಳ್ಳುತ್ತಾನೆ.

ಮೇಲಿನ ಎರಡು ಚಿತ್ರಣಗಳನ್ನು ಕಲ್ಪಿಸಿಕೊಳ್ಳಿ. ಮೊದಲನೆಯದು ಸುಮಾರು ಇಪ್ಪತ್ತು ವರ್ಷಗಳಷ್ಟು ಹಿಂದಿನ ಚಿತ್ರಣ. ಎರಡನೆಯದು ಇಂದಿನ ಚಿತ್ರಣ. ಕ್ಯಾನ್ಸರ್ ಚಿಕಿತ್ಸೆಯಲ್ಲಿ ಅಭೂತಪೂರ್ವ ಬೆಳವಣಿಗೆಯಾಗಿರುವುದನ್ನು ಮೇಲಿನ ಎರಡು ಚಿತ್ರಣಗಳು ಸೂಚಿಸುತ್ತವೆ.

ಕ್ಯಾನ್ಸರ್ ಎಂದರೆ ಅದೊಂದು ಭೀಕರ, ಭಯಾನಕ, ಮಹಾಮಾರಿ ಎಂಬ ಭಾವನೆ ಇತ್ತು. ಈ ಕಾಯಿಲೆಗೆ 'ಪ್ರತ್ಯೇಕತೆ'ಯ ಹಣೆಪಟ್ಟಿಯೂ ಇತ್ತು. ವೈದ್ಯಕೀಯ ವಿಜ್ಞಾನ, ಔಷಧಿ ತಂತ್ರಜ್ಞಾನ ಮುಂದುವರಿದಂತೆ ಈ 'ಅರ್ಬುದ'ವೂ ಈಗ ಮೊದಲಿನಂತೆ ಆತಂಕ ಹುಟ್ಟಿಸುವ ಕಾಯಿಲೆಯಾಗಿ ಉಳಿದಿಲ್ಲ. ಏಕೆಂದರೆ ಅರ್ಬುದಕ್ಕೂ ಈಗ ಪರಿಣಾಮಕಾರಿ ಔಷಧಿ ಲಭ್ಯವಿದೆ. ಸೂಕ್ತ ಚಿಕಿತ್ಸೆಯಿದೆ.

ಭಾರತದಲ್ಲಿ ವಿವಿಧ ರೀತಿಯ ಕ್ಯಾನ್ಸರ್‌ನಿಂದ ಬಳಲುವವರ ಸಂಖ್ಯೆ ಹೆಚ್ಚುತ್ತಿದೆ. ಕಾಯಿಲೆಗಳ ಮಟ್ಟಿಗೆ ಹೃದಯಾಘಾತ ಮೊದಲ ಸ್ಥಾನದಲ್ಲಿದ್ದರೆ, ಕ್ಯಾನ್ಸರ್ ಎರಡನೆ ಸ್ಥಾನದಲ್ಲಿದೆ ಎನ್ನುತ್ತದೆ 'ವಿಶ್ವ ಆರೋಗ್ಯ ಸಂಸ್ಥೆ'ಯ ವರದಿ.

ಅಡಿಯಿಂದ ಮುಡಿಯವರೆಗೆ ದೇಹದ ಅಂಗಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಪ್ರತಿ ಅಂಗಕ್ಕೂ ಅಂಟಿದೆ ಕ್ಯಾನ್ಸರ್ ನಂಟು. ಶಿರೋಭಾಗದಲ್ಲಿ ಮೆದುಳಿನ ಕ್ಯಾನ್ಸರ್, ಕೊಂಚ ಕೆಳಗಿಳಿದರೆ ಬಾಯಿ (ಮೌತ್) ಕ್ಯಾನ್ಸರ್, ಕೊರಳಿನ ಭಾಗದಲ್ಲಿ ಥೈರಾಯ್ಡ್ ಕ್ಯಾನ್ಸರ್, ಶ್ವಾಸಕೋಶಕ್ಕೆ ತಗಲುವ ಲಂಗ್ಸ್ ಕ್ಯಾನ್ಸರ್, ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್, ಸ್ತನಚರ್ಮ ಕ್ಯಾನ್ಸರ್, ಹೊಟ್ಟೆ ಭಾಗಕ್ಕೆ ಬಂದರೆ ಲಿವರ್ ಕ್ಯಾನ್ಸರ್, ಮಹಿಳೆಯರಲ್ಲಿ ಗರ್ಭಕೊರಳಿನ



## ಚರ್ಮ ಕ್ಯಾನ್ಸರ್‌ಗೆ ಹೊಸ ಚಿಕಿತ್ಸೆ

ಚರ್ಮದ ಕ್ಯಾನ್ಸರ್‌ಗೆ ಪರಿಣಾಮಕಾರಿ ಚಿಕಿತ್ಸೆ ನೀಡಲು ಅಯಸ್ಕಾಂತೀಯ ನ್ಯಾನೊ ಎಳೆಗಳನ್ನು ಒಳಗೊಂಡ (ಮ್ಯಾಗ್ನೆಟಿಕ್ ನ್ಯಾನೊಫೈಬರ್) ಬ್ಯಾಂಡೇಜ್ ಅನ್ನು 'ಭಾರತೀಯ ವಿಜ್ಞಾನ ಸಂಸ್ಥೆ'ಯ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ಸದ್ಯಕ್ಕೆ ಚರ್ಮ ಕ್ಯಾನ್ಸರ್‌ಗೆ ಶಸ್ತ್ರಚಿಕಿತ್ಸೆ, ವಿಕಿರಣ ಚಿಕಿತ್ಸೆ ಮತ್ತು ಕಿಮೋಥೆರಪಿ ಜೊತೆಗೆ ನ್ಯಾನೊಎಳೆ ಬ್ಯಾಂಡೇಜ್ ಚಿಕಿತ್ಸೆ ಹೊಸ ಸೇರ್ಪಡೆ.

ಪ್ರಯೋಗಾಲಯದಲ್ಲಿ ನಡೆಸಿದ ಪ್ರಯೋಗಗಳಿಂದ ಚರ್ಮದ ಕ್ಯಾನ್ಸರ್‌ಗೆ ಇದು ಅತ್ಯಂತ ಪರಿಣಾಮಕಾರಿ ಚಿಕಿತ್ಸೆ ಎಂಬುದು ನಿರೂಪಿತವಾಗಿದೆ. ಈ ಪ್ರಯೋಗ ಸದ್ಯ ಪ್ರಾಥಮಿಕ ಹಂತದ್ದಾಗಿದ್ದು, ಮುಂದಿನ ದಿನಗಳಲ್ಲಿ ಕ್ಲಿನಿಕಲ್ ಪ್ರಯೋಗಗಳಿಗೆ ಒಳಪಡಿಸಬೇಕಾಗಿದೆ. ಚರ್ಮ ಕ್ಯಾನ್ಸರ್‌ನ ಗಡ್ಡೆಯ ಕೋಶಗಳಿಗೆ ಈ ಬ್ಯಾಂಡೇಜ್‌ನಲ್ಲಿರುವ ಅಯಸ್ಕಾಂತೀಯ ನ್ಯಾನೊ ಎಳೆಗಳು ಶಾಖವನ್ನು ನೀಡಿ ಕೊಲ್ಲುವ ಕೆಲಸ ಮಾಡುತ್ತವೆ ಎಂಬ ವಿಚಾರ ಇತ್ತೀಚೆಗೆ ಅಂತರರಾಷ್ಟ್ರೀಯ ಜರ್ನಲ್ 'ಕ್ಯಾನ್ಸರ್ ರಿಪೋರ್ಟ್' ಜರ್ನಲ್‌ನಲ್ಲಿ ಸಂಶೋಧನಾ ಲೇಖನ ರೂಪದಲ್ಲಿ ಪ್ರಕಟವಾಗಿರುವುದನ್ನು ಇಲ್ಲಿ ದಾಖಲಿಸಬಹುದು.

